Regd No B C. 155

Sn

13—2—1965

48 th Year
ನೇ ವರ್ಷ
★
Sri 'Satyavadi
— DAILY —
MYSORE

# ಸತ್ಯವಾದಿ

ಸ್ಥಾಪಕರು: ಅಂಮಸೆ ಸಿರಸ್ಯೇದಾರ್ ಏಂ ವಿ ಸುಬ್ಬರಾಯುರು 2 ಪೈ|

ಪ್ರವಾದಿ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನೆ ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

## ಕನ್ನಡ ಪ್ರೇಮಿಗಳ ನಿರಶನ ಕಾರ್ಯ

ಬೆಂಗಳೂರು— ಮಂಗಳವಾರ ಕನ್ನಡ ಪ್ರೇಮಿಗಳು ಸ್ಥಾಪಿಸಿದ ಅಂಗ್ಲೇಜಿ ಹಠ ಕಾರ್ಯಾಕಾರಿ ಸಮಿತಿಯು ಕನ್ನಡವನ್ನು ರಾಜ್ಯದ ಅಡಳಿತ ಭಾಷೆಯಾಗಿ ಮಾಡಬೇಕೆಂಬ ತಮ್ಮ ಕೇಳಿಕೆಯನ್ನು ಒತ್ತಾಯ ಪಡಿಸಲು ಫೆಬ್ರುವರಿ 15 ರಿಂದ ತಂಡತಂಡವಾಗಿ ವಿಧಾನ ಸಭೆಯ ಮುಂದೆ ಉಪವಾಸ ಮುಷ್ಕರ ನಡೆಸಲು ನಿರ್ಧರಿಸಲಾಯಿತು.

❋

## ಚಳವಳ ಮುಂದಕ್ಕೆ

ಮದರಾಸು— ತಮಿಳುನಾಡು ವಿದ್ಯಾರ್ಥಿ ಹಿಂದೀ ವಿರುದ್ಧ ಕಾರ್ಯಾಚರಣ ಸಮಿತಿ ತನ್ನ ಈಗಿನ ಚಳವಳವನ್ನು ಮುಂದಕ್ಕೆ ಹಾಕಲು ನಿರ್ಧರಿಸಿತು

---

ಉಟಕಮಂಡು— ಚಾರಿಂಗ್ ಕ್ರಾಸಿನಲ್ಲಿದ್ದ ಗಾಂಧಿ ಪ್ರತಿಮೆ ಮಾಯವಾಗಿದೆ.

---

## ನಾಯಕರ ಅಸಂತುಷ್ಟಿ

ಮದರಾಸು— ಅಣ್ಣಾದುರೈ, ರಾಜಾಜಿ ಮತ್ತು ಹಿಂದೀವಿರೋಧ ಚಳವಳಿ ಸಮಿತಿಯು ಒಬ್ಬ ವಕೀಲರಿಗೆ ಪ್ರಧಾನ ಸಿಗಳ ಅಕಾಶವಾಣಿ ಭಾಷಣವನ್ನು ಒಪ್ಪಲಿಲ್ಲ — ಇಂಗ್ಲೀಷನ್ನು ರಾಜ್ಯಾಂಗವಾಗಿ ನಿಷೇಧ ಭಾವನೆಯಂತೆ ಸೇರಿಸಬೇಕೆಂಬ ಕೇಳಿಕೆಯನ್ನು ಒತ್ತಾಯ ಮಾಡಿರುವರು

★

ಸಾಳೆಯ ಪಂಚಾಂಗ
ದೈವಜ್ಞಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ ಡಾಜಲಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಪಂಚಕೃಷ್ಣ ಜೋಯಿಸರಿಂದ
14 ಭಾನುವಾರ ತ್ರಯೋದಶಿ ಪುಷ್ಯ

## ರೂ. 3 ಲಕ್ಷ ವಿನೋದ ಭಾವೆರವರ ನಷ್ಟ ಪರಿಹಾರ

ಬೊಂಬಾಯಿ— ಕೈಗಾರಿಕೋದ್ಯಮಿ ಶ್ರೀ ಕೃಷ್ಣರಾಜ ಥ್ಯಾಕರ್ಸಿಯವರಿಗೆ ಬ್ಲಿಟ್ಜ್ ಪತ್ರಿಕಾ ಸಂಪಾದಕ ಶ್ರೀ ಕರಂಜಿಯವರು ಮಾನಹಾನಿಕರ ಲೇಖನ ಪ್ರಕಟಿಸಿದ್ದಕ್ಕಾಗಿ 3 ಲಕ್ಷ ರೂಗಳ ಪರಿಹಾರ ಕೋರ್ಟು ಖರ್ಚು ಮತ್ತು ಈ ಹಣದ ಮೇಲೆ ವಾರ್ಷಿಕವಾಗುವವರೆಗೆ ಶೇಕಡ 6 ರಂತೆ ಬಡ್ಡಿ ವಾರ್ಷಿಕ ಮಾಡಬೇಕೆಂದು ಹೈಕೋರ್ಟ್ ಅರ್ಜಿ ಮಾಡಿದೆ — ಇದರ ವಿಚಾರಣೆಯು 111 ದಿನಗಳು ನಡೆದು ವಕೀಲರು ಸಂಪೂರ್ಣವಾಗಿ ಮುಗಿಸಲು 31 ದಿನಗಳನ್ನು ತೆಗೆದುಕೊಂಡರು

❋

## ಶೇಂದಿ ಪತ್ತೆ

ತಿರುಪತಿ— 14 ಮಂದಿ ಅಕ್ಕಸಾಲಿಗರ ಮೇಲೆ ಇತ್ತೀಚೆಗೆ ದಸ್ಯುಗಿರಿಯಾಗಿದೆ : 250 ಸೀಸೆ ಐಡಿ ಟಾಡಿ ವಶಪಡಿಸಿಕೊಳ್ಳಲಾಗಿದೆ : 4 ಬೈಸಿಕಲುಗಳೂ, 2 ಜೊತೆ ಎತ್ತು ಮತ್ತು ಶೇಂದಿ ಇಳಿಸುವ ಸಲಕರಣೆಗಳೂ ವಶಪಡಿಸಿಕೊಳ್ಳಲಾಯಿತು.

## ಗೋಳ್ಗೇಬಾರಿಗೆ ಆಹುತಿ

ಮದರಾಸು 12— ಉತ್ತರ ಅರ್ಕಾಟಿನ ವೆರ್ನಂಬೂಟ್ಟಾಲ್ಲಿ ಪೋಲೀಸರು ಗೋಳೀಬಾರಿನಿಂದ 4 ಮಂತಿ ಸತ್ತು, 6 ಮಂದಿ ಗಾಯಗೊಂಡರು : ಅರಣಿಯಲ್ಲಿ 3 ಮಂದಿ ಸತ್ತರು : ತಿರುವರೆಯೂರಿನಲ್ಲಿ ಒಬ್ಬ ಸತ್ತ ಪೀಟರ್ಸ್‌ರೋಡಿಲ್ಲಿ 3 ಮಂದಿ ಗಾಯಗೊಂಡರು

## ಸಂಪೂರ್ಣ ಹರತಾಳ

ಮದರಾಸು 12— ಮದರಾಸು ರಾಜ್ಯದಲ್ಲಿ ಹಿಂದೀ ವಿರುದ್ಧ ಚಳವಳಿ ಸಮಿತಿ ಇತ್ತಿದ್ದ ಕರೆಯಂತೆ ಸಂಪೂರ್ಣ ಹರತಾಳ ನಡೆಯಿತು

❋

### ನಿಜಲಿಂಗಪ್ಪನವರ ಸಲಹೆ

ಬೆಂಗಳೂರು— ಹಿಂದಿಯನ್ನು 20 ವರ್ಷ ಕಾಲ ಮುಚ್ಚಿಡಬೇಕೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಸಲಹೆಯಾಗಿದೆ

## ನಿರ್ದೋಷಿ

ನವದೆಹಲಿ— ಮೈಸೂರು ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಮೇಲಿನ ಆಪಾದನೆಗಳನ್ನು ಕೇಂದ್ರ ಮಂತ್ರಿಮಂಡಲ ಲೆಕ್ಕಿಸಲಿಲ್ಲ.

★

ತಿರುಪತಿ— ದೊಡ್ಡಹಳ್ಳಿಮುಂಡಾದ ಗ್ರಾಮಗಳಲ್ಲಿ ಉಂಟಾಗಿರುವ ಒಂದು ಗೊತ್ತಿಲ್ಲದ ರೋಗದಿಂದ 100 ಕ್ಕೂ ಹೆಚ್ಚು ಕುರಿಗಳು ಸತ್ತಿವೆ

## ಪದ್ಮಾಲೋಚನೆ

ಮೈಸೂರು— ರಾಜ್ಯದ ತಾತ್ಕಾಲಿಕ ಪರಿಸ್ಥಿತಿ ಕುರಿತು ಕಾಂಗ್ರೆಸ್ಸು ಅಧ್ಯಕ್ಷ ಕಾಮರಾಜರೂ, ಕೃಷ್ಣಮಾಚಾರಿಯವರೂ ಬೆಂಜೀವರೆಡ್ಡಿ, ಇಂದಿರಾ ಗಾಂಧಿಯವರು ಇವರೊಡನೆ ಮಧ್ಯರಾತ್ರಿ ಮುಖ್ಯಮಂತ್ರಿ ಭಕ್ತವತ್ಸಲಂ ಉಸ್ತಕವಾಗಿ ಚರ್ಚೆ ನಡೆಸಿದರು

## ಉಪವಾಸ ಕಾರ್ಯ-

ಪೇನಾಕಾ ಅಶ್ರಮ ( ವಾರ್ಧಾ (2 ಅಚಾರ್ಯ ಭಾವೆಯವರು ಮದರಾಸು ರಾಜ್ಯದಲ್ಲಿ ನಡೆದ ಹಿಂಸಾಕಾಂಡವನ್ನು ಪ್ರತಿಭಟಿಸಿ ಅನಿರ್ದಿಷ್ಟ ಕಾಲ ಉಪವಾಸ ಮಾಡುವರು

❋

ಕೊಯಮತ್ತೂರು— ನಿನ್ನೆ ಪೊಲೀಸಾಚಾರಿಯಲ್ಲಿ ಹಿಂಸಾತ್ಮಕ ಗುಂಪನ್ನು ಚದುರಿಸಲು ಸೈನಿಕರು ಹಗುರ ಏಷೀನು ಗನ್ನನ್ನು ಉಪಯೋಗಿಸಿದರು — 10 ಜನ ಸತ್ತಿರುವರೆಂದು ಶಂಕಿಸಲಾಗಿದೆ

ನವದೆಹಲಿ— ಸರ್ಕಾರಿ ನ್ಯೂಸ್ ಪ್ರಿಂಟು ಮೇಲಿನ ನಿರ್ಬಂಧ ದೋರಣೆಯನ್ನು ಪ್ರತಿಭಟಿಸಿ ಮಾರ್ಚಿ 3 ರಂದು ಪತ್ರಿಕೆಗಳನ್ನು ಪ್ರಕಟಿಸಬಾರದೆಂದು ಈಸ್ಟರ್ನ್ ನ್ಯೂಸ್‌ಪೇಪರುಗಳ ಸೊಸೈಟಿ ತನ್ನ ಸದಸ್ಯರಿಗೆ ಸೂಚಿಸಿದೆ.

ಬೊಂಬಾಯಿ— ರೂ.4 ಲಕ್ಷ ಬೆಲೆಯ ಚಿನ್ನ, ಕರೆನ್ಸಿ, ಗಡಿಯಾರ ಮತ್ತಿತರ ವಿದೇಶೀ ಪದಾರ್ಥಗಳನ್ನು ನಗರದ ವಿವಿಧ ಭಾಗಗಳಲ್ಲಿ ಕಸ್ಟಂಸಿನವರು ವಶಪಡಿಸಿಕೊಂಡರು.

ಮದರಾಸು 12— ನಗರದ ಉತ್ತರ ವಾರಿಗಾಗಿ 45 ಲಾರಿ ತುಂಬ ಪೋಲೀಸರು ತಿರುಗುತ್ತಿದ್ದರು — ಮುಖ್ಯಮಂತ್ರಿಗಳ ನಿವಾಸಕ್ಕೆ ಭಾರಿ ಭದ್ರತೆ ಏರ್ಪಡಿಸಲಾಗಿತ್ತು — ಮುಖ್ಯ ಮಂತ್ರಿಗಳ ಕಾರಿಗೆ ಬಾಂಬು ಹಾಕಲಾಗುವುದೆಂದು ಅನಾಮಧೇಯ ಪತ್ರವೊಂದು ಪೋಲೀಸಿಗೆ ತಿಳಿಸಿದ್ದರಂತೆ.

ಮದರಾಸು—ರಾಜ್ಯದ ಅನೇಕ ಕಡೆ ಪೋಲೀಸರು ಮತ್ತು ಸೈನಿಕರು ಗುಂಡು ಹಾರಿಸಿದ ಪರಿಣಾಮ ನಿನ್ನೆ 24 ಮಂದಿ ಸತ್ತರು, ಅನೇಕರು ಗಾಯಗೊಂಡರು

## ಯುವಕರ ವಿಷಯದಲ್ಲಿ

ಇಂಗ್ಲೀಷು ಯುವಕ ಹುಚ್ಚ : ಅಮೇರಿಕಾ ಯುವಕ ಅಕಾಂಕ್ಷೆ ಇಲ್ಲದವ : ಮಧ್ಯ ಮಟ್ಟ ದೂಂಪತ್ಯಾಚ್ಯದ ಯುವಕ ಅಪಾಯಕಂ ರಾಜಕೀಯುವವರಾಗಿದ್ದಾನೆ — ಇಂಗ್ಲೀಷು ಯುವಕರೀ ಹುಡುಗಿಯಂತೆ ತಮ್ಮ ಕೂದಲು ಗಳನ್ನು ಬಿಟ್ಟುಕೊಂಡು-ಕ್ಷಾತೆ ಬೀದೀ ದೀಪಗಳ ಕೆಳಗೆ ಮುತ್ತಿಟ್ಟುಕೊಂಳ್ಳು ಕ್ಷಾರೆ : — ಪೂರ್ವದಲ್ಲಿನ ಯುವಕರು ಸಂಕಲ್ಪ ಅಧಿಕಾರಾಕ್ಷಾರಿ ಶಸಮರ್ಥ ರಾಣುವವರಾಗಿದ್ದಾರೆ — ಉತ್ಸಾಹ ಅಮೇರಿಕಾ ಯುವಕರು ನಿರಾಶೆಯಲ್ಲಿ ಮುಳು ಕಾಲವನ್ನು ಲೆಖ್ಖಾಹಾಕ್ಷತ್ತಾ ಮತ್ತು ನಿದ್ರೆಯಲ್ಲಿ ಜೀವಕಳೆಯುಕ್ಷಾರೆ — ಎಂದು ಹ್ಯಾಲಿಫಾಕ್ಸಿನ ಡಾಲ್‌ಹೌಸಿ ವಿಶ್ವವಿದ್ಯಾನಿಲಯದಲ್ಲಿ ಅಸಿಸ್ಟೆಂಟು ಇಂಗ್ಲೀಷು ಪ್ರೊಫೆಸರು ಡಾ || ವರ್ನರವರು, ವಿದೇಶ ಮತ್ತು ಕಾದುಸ್ವೆಲ್ಲಿನ 65 ವಿದ್ಯಾರ್ಥಿಗಳ ಭೋಜನಕೂಟದಲ್ಲಿ ಹೇಳಿದರು.

★

### ಕೇಂದ್ರ ಆಹಾರ ಸಂಶೋಧನಾಲಯದಲ್ಲಿ

ಮೈಸೂರು— ತಾ || 10 ರಂದು ಸಂಶೋಧನಾಲಯಕ್ಕೆ ಆಹಾರ ಕಾರ್ಪೋರೇಷನ್ನಿನ ಅಧ್ಯಕ್ಷ ಶ್ರೀ ಟಿ ಎ ಪೈ ಭೇಟಿ ಕೊಟ್ಟಿದ್ದರು : ಆಹಾರದಲ್ಲಿ ಅಪಾರ ಸಫ್ಟವಾಗುತ್ತಿರುವದನ್ನು ತಪ್ಪಿಸಲು ಈ ಸಂಸ್ಥೆಯಲ್ಲಿ ಮಾಡಿರುವ ವಿಜ್ಞಾನ ಸಂಶೋಧನೆ ಬಗ್ಗೆ ಡೈರೆಕ್ಟರವರು ಮತ್ತು ಅಧಿಕಾರಿ ವರ್ಗದೊಡನೆ ಚರ್ಚಿಸಿದರು. ಕಾರ್ಪೋರೇಷನ್ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಅಮೇರಿಕದಂತೆ ವ್ಯವಸಾಯದ ಅಭಿವೃದ್ಧಿಗೆ ಮಾಡಬೇಕಿರುವ ಸಹಾಯವನ್ನು ವಿವರಿಸಿದರು : ದೇಶದ ಹಲವು ಕೇಂದ್ರಗಳಲ್ಲಿ ಧಾನ್ಯಾನು ಅನುಕೂಲ ಬದಿಗಿಸಲು ವಿಶೇಷ ಮಾಡುವ ವಿಷಯವನ್ನು ತಿಳಿಸಿದರು.

ಡೈರೆಕ್ಟರು ಡಾ || ಪ್ರಾಣಯ್ಯನವರು ಸಕಲ ರೀತಿ ಸಹಕಾರ ನೀಡುವ ಭರವಸೆಯಿತ್ತರು : ಶ್ರೀ ಪೈಯವರು ಸಮಸ್ಯೆಯನ್ನು ಅಂತು ಆಹಾರ ಕಾರ್ಪೋರೇಷನ್ನು ವಿಜ್ಞಾನ ಸಂಶೋಧನೆಯು ಬೆಲೆಯನ್ನು ತಿಳಿದಿದ್ದಕ್ಕಾಗಿ ಮೆಚ್ಚಿದರು : ಶ್ರೀ ಪೈಯವರು ಸ್ವಲ್ಪ ಹೊತ್ತಿದ್ದು ಎಲ್ಲಾ ಪ್ರಾಜೆಕ್ಟುಗಳ ಬಗ್ಗೆ ತಿಳಿದುಕೊಂಡು ಸಂಶೋಧನಾಲಯವೂ ಕಾರ್ಪೋರೇಷನ್ನೂ ಆಕಟಿ ಸಂಪರ್ಕದಿಂದ ಕಾರ್ಯನಡೆಸುವ ರೀತಿ ಇರಬೇಕೆಂದರು.

### ಕ್ಯಾಲೆಂಡರು ಸ್ವೀಕಾರ

ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್‌ರವರು ಕಳುಹಿಸಿರುವ 1965 ನೇ ಇಸವಿಯ ವರ್ಣರಂಜಿತ ಚಿತ್ರವಿರುವ ಸುಂದರ ಕ್ಯಾಲೆಂಡರನ್ನು ಪಂದನಾ ಪೂರ್ವಕವಾಗಿ ಸ್ವೀಕರಿಸಿದ್ದೇವೆ.


ವುಡ್‌ಲಾಂಡ್ ಅಮೋಘ 2 ನೇ ವಾರ
ಬೆಳಿಗ್ಗೆ 8 ಕ್ಕೆ ಸರಿಯಾಗಿ ಜನಸಂದಣಿಯ ಪ್ರದರ್ಶನ
— ಅಮೋಘ ಆಸ್ಪೋನ್ ಕಲರ್ ಹಿಂದಿ ಚಿತ್ರ —
ಹರ್ಕ್ಯುಲೆಸ್ HERCULES
ನಟವರ್ಗ— ಧರ್ಮೇಂದ್ರ ಸಿಂಗ್, ಶಶಿ, ಹೆಲೆನ್, ಮನಮೋಹನ್, ವ್ಯಾಸ್, ಮುಮ್ತಾಜ್
ಸಾಹಸಮಯ ರೋಮಾಂಚಕ ಅದ್ಭುತ ಚಿತ್ರ : ನೃತ್ಯ ಸಂಗೀತ ವಿನೋದಮಯ
[ ದಿನವಹಿ 3 ಪ್ರದರ್ಶನಗಳು ]

ಅಪೆರಾ— 12-2-65 ರಿಂದ
ಮನಮೋಹಕ ಕಪ್ಪು ಬಿಳುಪು ಚಿತ್ರ [ ದಿನ 3 ಆಟಗಳು ]
ಆ ಮಾ ಎಂಗೆ ?
ನಟವರ್ಗ— ಮುಕ್ರಾಣಿ, ಜಯಶ್ರೀ, ಡಂದ್ರಕಾಂತ, ಮನೋರ್
ಬೇಬಿ ಶಕೀಲ

ರಣಜಿತ್‌ನಲ್ಲಿ ಜನಭರಿತ 2 ನೇ ವಾರ
.... ಪ್ರತಿ ಸಂಸ್ಥಾರವೂ ನೋಡಿ ಆನಂದಿಸಕಕ್ಕ ಅಕ್ಷಯೋಪ್ಪ ಕನ್ನಡ ಚಿತ್ರ ....
— ಕರ್ನಾಟಕ ಫಿಲಂಸ್ ಅರ್ಪಿಸುವ, ವಿವಿಧ ಭಾರತಿಯವರ —
ಬೆರತ ಜೀವ [ಕನ್ನಡ]
ತಾರಾಗಣ— ಕಲ್ಯಾಣ ಕುಮಾರ್, ಅಶ್ವಥ್, ಕಾಮಾಡೆಂದ್ರಕಾಸ್,
ನರಸಿಂಹರಾಜು, ಶಿವರಾಜ್, ಪದ್ಮಾಜಾದೇವಿ, ಲಕ್ಷ್ಮೀದೇವಿ, ಜಯಶ್ರೀ
ನಿರ್ಮಾಪಕರು— ಕು.ರಿತ. ಸೀತಾರಾಮು ಶಾಸ್ತ್ರಿ
4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ರದ್ದು ಮಾಡಿರುತ್ತೆ.
ಪ್ರತಿ ದಿನ 3 ಪ್ರದರ್ಶನಗಳು — ಕರ್ನಾಟಕ ಫಿಲಂಸ್ ಹಂಚಿಕೆ
ಆಶೋಕಾ ಏಜೆನ್ಸೀಸ್
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ.

SHAKTI
SUDHA
Superb Tonic

Help The 'Gorakshana'
"ಗೋರಕ್ಷಣ"ಕ್ಕೆ ಪೂರಕವಾಗಿರಿ

Lakshminarasimha Press
Quality Printing — Neat Binding
Sivarampet, Mysore


ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ಪಡೆಯಲಿ

Edited, Printed & Published by the Proprietor
Dharma Prachara Nirata M. S. Krishna Rao
at the Satyavadi Press, Chamarajapuram, Mysore 4